

# ಸರ್ವೋತ್ತಮ ವಾತನಾಶಕ ಔಡಲ ಗಿಡ

**ಆಯುರ್ವೇದದಲ್ಲಿ ಔಷಧಿಯಾಗಿ ಮಹತ್ವದ ಸ್ಥಾನ ಹೊಂದಿರುವ ಔಡಲ ವಾತವ್ಯಾಧಿಗಳಿಗೆ ಸರ್ವಶ್ರೇಷ್ಠ ಔಷಧ.**

★ ಚಿತ್ರ ಬರಹ: ಡಾ. ಸುಮಿತ್ರಾ ಕೆ. ಪಾಟೀಲ

ಔಡಲ ಗಿಡ, ಇದು ಎಲ್ಲೆಂದರಲ್ಲಿ ಹುಲುಸಾಗಿ ಬೆಳೆಯುವ ಸಸ್ಯ. ಇದರಲ್ಲಿ ಎಷ್ಟೊಂದು ಔಷಧೀಯ ಗುಣಗಳಿವೆ ಮತ್ತು ಉದ್ಯಮದಲ್ಲಿಯೂ ಎಷ್ಟೊಂದು ಉಪಯುಕ್ತವಿದೆ ಎಂದು ಬಹುಶಃ ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ಸರ್ವ ಋತುಗಳಲ್ಲಿಯೂ ಬೆಳೆಯುವ ಔಡಲ, ಮಧ್ಯಮಾಕಾರದ ಏಕವರ್ಷಾಯು, ಬೆಳೆಯಲಿಕ್ಕೆ ಬಿಟ್ಟರೆ ಬಹುವರ್ಷಾಯು ಗಿಡ. ಇದರಲ್ಲಿ ಎರಡು ಬಗೆ.

1. ಶ್ವೇತ ಬಣ್ಣದ್ದು; 2. ಕೆಂಪು ಬಣ್ಣದ್ದು. ಆದರೆ ಇವೆರಡರ ಗುಣಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ಇದನ್ನು ಇಂಗ್ಲಿಷ್‌ನಲ್ಲಿ **Castor oil plant** ಎನ್ನುತ್ತಾರೆ. ವೈಜ್ಞಾನಿಕ ಹೆಸರು **Ricinus Communis Linn**, ಸಂಸ್ಕೃತದಲ್ಲಿ ಏರಂಡವೆನ್ನುವರು, ಊರುಬಿಕ, ಗಂಧರ್ವಹಸ್ತ, ಉತ್ಥಾನ ಪತ್ರ, ವಾತಾರಿ ಮುಂತಾದ ಪರ್ಯಾಯ ನಾಮಗಳನ್ನು ಹೊಂದಿದೆ. ಮೂಲ ಆಫ್ರಿಕಾ, ಭಾರತದಲ್ಲಿ ಎಲ್ಲ ಕಡೆ ಬೆಳೆಯುತ್ತದೆ. ರೈತರು ಔಡಲ ಎಣ್ಣೆಗಾಗಿ ತಮ್ಮ ಹೊಲಗಳಲ್ಲಿ ಬೆಳೆಯುತ್ತಾರೆ.

ಇದರ ಎಲೆ ಪಪ್ಪಾಯಿ ಗಿಡದ ಎಲೆಯ ಹಾಗಿದ್ದು (ಗಂಧರ್ವ ಹಸ್ತ) ಹಣ್ಣುಗಳು ಗೊಂಚಲಾಗಿ ಮೇಲ್ಮೈಯಲ್ಲಿ ಮುಳ್ಳಿನ ಹಾಗಿರುತ್ತದೆ. 2–3 ಬೀಜಗಳಿರುತ್ತವೆ. ಬೀಜಗಳು ಚಿತ್ರಿತವಾಗಿಯೂ, ನುಣುಪಾಗಿಯೂ, ಬಿರುಸಾಗಿಯೂ ಇರುವಂಥ ಹೊರಮೈ ಪದರನ್ನು ಹೊಂದಿದೆ. ಒಡೆದರೆ ಒಳಗೆ ಬಿಳಿಯ ಬೇಳೆಯಂತಹ ಪದಾರ್ಥವಿದ್ದು, ಅದರಲ್ಲಿ ಔಡಲ ಎಣ್ಣೆ ತುಂಬಿರುತ್ತದೆ.

ಇಡೀ ಸಸ್ಯವು ವಿಷಕಾರಿಯಾಗಿದ್ದು **toxalbumin Ricin** ಎನ್ನುವ ವಿಷವಸ್ತು ಮತ್ತು ಶಕ್ತಿಶಾಲಿಯಾದ **Allergin** ಹೊಂದಿರುತ್ತದೆ. ಬೀಜಗಳ ತಿರುಳಿನಿಂದ ತಯಾರಿಸಿದ ಪ್ರೆಸ್ಸ್ ಕೇಕ್‌ನಲ್ಲಿ **recin** ಎಂಬ ವಿಷವಸ್ತು ಇದೆ. ಆದರೆ ಔಡಲದ ಎಣ್ಣೆಯಲ್ಲಿ ಈ ವಿಷವಸ್ತು ಇರುವುದಿಲ್ಲ. ಬೀಜ ಒಡೆದು ಒಳಗಿರುವ ಬಿಳಿಯ ಬೇಳೆಯಂತಹ ತಿರುಳನ್ನು ತಿಂದರೆ ಜೀವಕ್ಕೆ ಅಪಾಯ.

ಕೇವಲ **6 mg Recin** ಮಾರಣಾಂತಿಕವಾಗಬಹುದು. ಇದರ ಚಿಗುರು ಎಲೆ ವಿಷಕಾರಿಯಾಗಿದ್ದು, ಸಾಮಾನ್ಯವಾಗಿ ಮೇಕೆಗಳು (ಆಡು) ಮಾತ್ರ ಎಲೆಗಳನ್ನು ತಿನ್ನುತ್ತವೆ. ಆದರೆ ಚಿಗುರೆಲೆಗಳನ್ನು ತಿನ್ನುವುದಿಲ್ಲ. ದೊಡ್ಡ ಎಲೆಗಳಿಂದ ತಗೆದ ರಸವನ್ನು ಔಷಧಿಗಾಗಿ ಉಪಯೋಗಿಸುವರು.

ಭಾರತದ ಪ್ರಮುಖ ಎಣ್ಣೆಬೀಜಗಳಲ್ಲಿ ಔಡಲ ಒಂದಾಗಿದ್ದು, ಜಗತ್ತಿನ 2ನೇ ಅತಿ ದೊಡ್ಡ ಔಡಲಬೀಜ ಬೆಳೆಯುವ ದೇಶ ನಮ್ಮದು. ಸುಮಾರು 1,10,000 ಟನ್‌ಗಿಂತ ಹೆಚ್ಚು ಪ್ರತಿವರ್ಷ ಬೇರೆ ದೇಶಗಳಿಗೆ ರಫ್ತಾಗುತ್ತದೆ. ಔಡಲ ಎಣ್ಣೆಯು ವಾಣಿಜ್ಯ ಉದ್ದೇಶಗಳಿಗಾಗಿ ಸುಮಾರು 2,70,000 ಟನ್‌ಗಳಿಂದ 3,60,000ಗಳವರೆಗೆ ಬಳಕೆಯಾಗುತ್ತದೆ. ಇದನ್ನು ಅಧಿಕ ಪ್ರಮಾಣದಲ್ಲಿ ಕೀಲೆಣ್ಣೆ ಮತ್ತು ಸಾಬೂನುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. **Dehydrated cartor oil**ನ್ನು ಪೈಂಟ್, ಬಟ್ಟೆಗಳ ಬಣ್ಣ ತಯಾರಿಕೆ ಮತ್ತು ಪ್ಲಾಸ್ಟಿಕ್ ಉದ್ದಿಮೆಯಲ್ಲಿ ಕೂಡಾ ಬಳಸುತ್ತಾರೆ.

ಆಯುರ್ವೇದದಲ್ಲಿ ಔಷಧಿಯಾಗಿ ಮಹತ್ವದ ಸ್ಥಾನ ಹೊಂದಿರುವ ಔಡಲ ವಾತವ್ಯಾಧಿಗಳಿಗೆ ಸರ್ವಶ್ರೇಷ್ಠ ಔಷಧ. ಇದರ ಎಣ್ಣೆಯನ್ನು ಆಮವಾತಹರದಲ್ಲಿ ಉಪಯೋಗಿಸುವರು. ಔಡಲ ಬೇರಿನಲ್ಲಿ ಅತ್ಯುತ್ತಮ ವಾತನಾಶಕ ಮತ್ತು ಶುಕ್ರವರ್ಧಕ ಇರುತ್ತದೆ. ಇದರಿಂದ ತಯಾರಿಸಿದ ಚೂರ್ಣ ಮತ್ತು ಕಷಾಯಾದಿಗಳು ವಾತಶಮನ ಮಾಡುವಲ್ಲಿ ಸರ್ವೋತ್ಕೃಷ್ಟ ಆಗಿವೆ.

ಸುಟ್ಟ ಗಾಯದ ಮೇಲೆ ಎಲೆಗಳ ರಸ ಹಚ್ಚುವುದರಿಂದ ಮತ್ತು ಎಲೆಗಳನ್ನು ಕಟ್ಟುವುದರಿಂದ ಉರಿಯುವಿಕೆ ಬೇಗನೆ ಕಡಿಮೆಯಾಗುತ್ತದೆ.

ಔಡಲದ ಎಣ್ಣೆಯನ್ನು ನಿಯಮಿತವಾಗಿ ತಲೆಗೆ ಹಚ್ಚುತ್ತಾ ಬಂದರೆ ಕೂದಲು ಸೊಂಪಾಗಿ ಬೆಳೆಯುತ್ತದೆ. ಇದರಲ್ಲಿ ವಿಟಮಿನ್–ಇ, ಖನಿಜ, ಮತ್ತು ಪ್ರೊಟೀನ್ ಇದ್ದು, ಬ್ಯಾಕ್ಟೀರಿಯಾ ನಿರೋಧಕ ಗುಣಗಳಿಂದಾಗಿ ತಲೆಹೊಟ್ಟು, ತಲೆ ತುರಿಸುವುದು, ಕೂದಲು ಒಡೆಯುವುದು, ಕೂದಲು ಉದುರುವುದು ಮುಂತಾದವುಗಳನ್ನು ತಡೆಗಟ್ಟುತ್ತದೆ. ಕೂದಲಿನ ಕಾಂತಿಯನ್ನು ಹೆಚ್ಚಿಸಿ ದಟ್ಟವಾಗಿ ಸೊಂಪಾಗಿ ಬೆಳೆಯುವಂತೆ ಮಾಡುತ್ತದೆ.